## ಆಪ್ತ'ಕಥೆ'

'ಮುಗಿದ ಅಧ್ಯಾಯ' (ಫೆ. 22, ಸಿ.ಎನ್. ಮುಕ್ತಾ) ಕಥೆಯ ಎಳೆಗಳು ತುಂಬಾ ಆಪ್ತವಾಗಿವೆ. ಬದುಕಿನಲ್ಲಿ ಕೆಲವು ಪಾತ್ರಗಳು ಉಪಕಾರಿಯಾಗಿ ನಿಂತುಬಿಡುತ್ತವೆ. ಸರಸ್ವತಿ ಟೀಚರ್ ಪಾತ್ರವೂ ಇಲ್ಲಿ ಅಂತಹುದೇ ಉಪಕಾರ ಮಾಡಿ ಬದುಕನ್ನು ಇರುವಂತೆ ಆರಾಧಿಸಿರುವುದು ಕಾಣಿಸುತ್ತದೆ. ಕಥೆಯ ಸಾಲುಗಳು ಆಪ್ತವಾದುದನ್ನು ಬದುಕಿಗೆ ಹೇಳುತ್ತಲೇ ಸಾಗುತ್ತವೆ. ಉಪಕಾರದ ಧನ್ಯತೆ, ಸಾವಿನ ನಂತರವೂ ಅವರನ್ನು ನೆನಪುಗಳಾಗಿ ಇರಿಸುತ್ತದೆ ಎಂದು ಈ ಕಥೆ ಸಾರುತ್ತದೆ.

—ನಾಗರಾಜ ಬಿ. ನಾಯ್ಕ, ಕುಮಟಾ

## ಅನನ್ಯ ಕಥನಕಲೆ



ಕಥೆಯ ಕೇಂದ್ರವ್ಯಕ್ತಿ ಸರಸ್ವತಿಯಾದರೂ ಶಾರದೆಯ ಸಂಸಾರದ ಆಗುಹೋಗುಗಳ ನಡುವೆ ಒಂದು ದುರಂತ ಕಥೆಯನ್ನು ನಿರ್ಭಾವುಕವಾಗಿ ಹೇಳಿರುವುದು ಲೇಖಕಿಯ ನಿರೂಪಣಾ ಕೌಶಲ. ಕಥಾನಾಯಕಿಯರಾದ ಶಾರದೆ, ಸರಸ್ವತಿ ಇಬ್ಬರೂ ಬದುಕಿನ ಸತ್ಯಗಳೊಡನೆ ರಾಜಿ ಮಾಡಿಕೊಳ್ಳುವ ರೀತಿ ಆಶ್ಚರ್ಯಗೊಳಿಸುತ್ತೆ. ಮುಕ್ತಾರವರ ಕಥನಕಲೆ ಅನನ್ಯವಾದದ್ದು.

—ಡೀ ಮುರಳೀಧರ ಕುಮಾರ್

## ಅಂತರಂಗದ ಬದುಕು

ಶಾರದೆಯ ಗುಣ ಕಥೆಯನ್ನು ಗಟ್ಟಿಯಾಗಿಸಿದೆ. ಅಂತರಂಗದಲ್ಲಿ ಬದುಕು ಕಟ್ಟಿಕೊಂಡಿದ್ದ ಸರಸ್ವತಿ, ಓದುಗರಲ್ಲಿ ಗೌರವಯುತವಾಗಿ ಜೀವಿಸುತ್ತಾರೆ.

—ಕುಮಾರ್ ಬಿ.

## ನಕ್ಕರದೇ ಸ್ವರ್ಗ

'ನಕ್ಕು ಬಿಡಿ' ಅಂಕಣ ತುಂಬಾ ಚೆನ್ನಾಗಿದೆ. ಶರದ ಕುಲಕರ್ಣಿರವರು ಒಳ್ಳೆಯ ಹಾಸ್ಯೋಕ್ತಿಗಳ ಸಂಗ್ರಹ ಮಾಡಿದ್ದಾರೆ. 'ಸುಧಾ' ಕೈ ಸೇರುತ್ತಿದ್ದಂತೆ ನನ್ನ ಮನಸ್ಸು 'ನಕ್ಕುಬಿಡಿ' ಓದಲು ಹಾತೊರೆಯುತ್ತದೆ. 'ನಕ್ಕರೆ ಅದೇ ಸ್ವರ್ಗ'ವಲ್ಲವೇ?

—ಪವನ್, ಬೆಂಗಳೂರು

## ಅಪಾಯಕಾರಿ ನಡೆಗಿರಲಿ ಕಡಿವಾಣ

'ಅಪ್ರಾಪ್ತರ ವಾಹನ ಚಾಲನೆಗೆ ಬೇಕು ಕಡಿವಾಣ; ಪೋಷಕರ ಮುದ್ದು ಮಕ್ಕಳಿಗೆ ಕುತ್ತಾಗಬಾರದು' (ಫೆ. 22, ರಘುನಾಥ ಚ.ಹ.) 'ನಿಮ್ಮೊಡನೆ' ಬರಹ ಕಣ್ತೆರೆಸುವಂತಿದೆ. ಸ್ವೇಚ್ಛೆಯಿಂದ ವರ್ತಿಸುತ್ತಾ, ವ್ಹೀಲಿಂಗ್ ಮಾಡುತ್ತಾ ತಮ್ಮ ಜೀವವನ್ನು ಪಣಕ್ಕಿಡುವ ಜೊತೆಗೆ ಬೇರೆಯವರ ಜೀವಕ್ಕೂ ಕುತ್ತಾಗುವ ನಡೆಯನ್ನು ತಿದ್ದಲೇಬೇಕು. ರಸ್ತೆ ನಿಯಮಗಳ ಬಗ್ಗೆ ಹಾಗೂ ಅಪಾಯಕಾರಿ ನಡೆಗಳ ಬಗ್ಗೆ ಗೊತ್ತಿದ್ದರೂ ಅಪ್ರಾಪ್ತ ಮಕ್ಕಳಿಗೆ ವಾಹನ ನೀಡುವ ಪೋಷಕರಿಗೆ ಏನು ಹೇಳುವುದು? ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ ಎನ್ನುವಂತೆ ಅನಾಹುತಕ್ಕೂ ಮುನ್ನ ಎಚ್ಚೆತ್ತುಕೊಂಡರೆ ಒಳಿತು.

— ಸರೋಜಾ ಎಸ್.ಟಿ., ಮೈಸೂರು

## ನಮ್ಮ ಅನುಭವವೂ ಹೌದು!

'ವಸ್ತು ಪ್ರಕಾರ' (ಫೆ. 22, ಗಣೇಶ ಹೆಗ್ಗಡೆ) ಅನುಭವ ಕಥನ ತುಂಬಾ ಚೆನ್ನಾಗಿದೆ. ನಮ್ಮ ಅನುಭವವೂ ಮಿಳಿತವಾಗಿತ್ತು. ಲೇಖನ ಓದುತ್ತಾ ಬಸ್‌ನಲ್ಲಿ ಕುಳಿತಿದ್ದನ್ನೂ ಮರೆತು ಜೋರಾಗಿ ನಕ್ಕಿದ್ದು, ಎಲ್ಲರೂ ಒಮ್ಮೆ ನನ್ನ ಕಡೆ ನೋಡುವಂತಾಯಿತು!

—ಧನಲಕ್ಷ್ಮಿ ಪುರುಷೋತ್ತಮ, ಕೋಲಾರ

## 'ಮನಿ ಪ್ರಕಾರ'ವೇ ಸರಿ

ಲೇಖನ ಓದಿದ ನಂತರ ವಾಸ್ತುಪ್ರಕಾರದ ಬಗ್ಗೆ ವಸ್ತುಸ್ಥಿತಿಯ ಅರಿವು ಆಯಿತು. ಜೊತೆಗೇ 'ಮನಿ ಪ್ರಕಾರ' ಮನೆ ಎಂಬ ವಾಸ್ತವ ಹಾಸ್ಯ ಓದಿ ಮನಸ್ಸಿಗೆ ಮುದವೂ ಆಯಿತು.

—ಲಕ್ಷ್ಮಣ್ ಜಿ., ಮೈಸೂರು



## ನಿವೃತ್ತಿಗೆ ಮುಂಚೆ ಮನೆ ಕಟ್ಟಿದೆ

ನಾನು 1995ರಲ್ಲಿ ಮನೆ ಕಟ್ಟಿದ್ದು. ಮಕ್ಕಳ ಜವಾಬ್ದಾರಿ ಮುಗಿಸಿದ್ದೇನೆ. ಈಗ ನಾವಿಬ್ಬರು ಮಾತ್ರ ಇದ್ದೇವೆ, ನೆಮ್ಮದಿಯಿಂದ. ಅದಕ್ಕೆ ಕಾರಣ ನಮ್ಮ ಆರ್ಥಿಕತೆಯ ಅನುಕೂಲಕ್ಕೆ ತಕ್ಕಂತೆ ಮನೆ ಕಟ್ಟಿದ್ದು. ಅದೇನೋ ಹೇಳ್ತಾರಲ್ಲ... ಹಾಸಿಗೆ ಇದ್ದಷ್ಟು ಕಾಲು ಚಾಚು ಅಂತ, ಹಾಗೆ.

—ರಘುನಾಥ ರಾವ್ ತಾಪ್ಸೆ, ದಾವಣಗೆರೆ

## ಮನೆ ಕಟ್ಟುವ ಅನುಭವ

'ಮನೆ ಕಟ್ಟಿ ನೋಡು' ಎಂಬ ವಾಸ್ತವ ಸ್ಥಿತಿಯನ್ನು ಲಘುಹಾಸ್ಯದಲ್ಲಿ ದಾಟಿಸಿದ್ದು ಇಷ್ಟವಾಯಿತು. ನಿವೇಶನವನ್ನು ಕಷ್ಟಪಟ್ಟು ಕೊಂಡ ಮೇಲೆ ಮನೆಗೆ ಬರುವ ನೆಂಟರಿಷ್ಟರನ್ನು ಸೈಟ್ ತೋರಿಸಲು ಉತ್ಸಾಹದಿಂದ ಕರೆದುಕೊಂಡು ಹೋಗುತ್ತಿದ್ದೆ. ಮನೆ ನಿರ್ಮಾಣದ ಗೋಡೆಯೇನೋ ಬೇಗ ಎದ್ದುಬಿಟ್ಟಿತು. ಆದರೆ ಮನಿ ಸಮಸ್ಯೆಯಿಂದ ಒಂದು ವರ್ಷದವರೆಗೆ ಕೆಲಸ ಸ್ಥಗಿತಗೊಂಡ ಕಹಿ ಘಟನೆ ನೆನಪಾಯಿತು.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ




## ಮಾಲಿನ್ಯಕ್ಕೆ 'ಸರಳ' ಉತ್ತರ

'ಮಾಲಿನ್ಯ; ಮಾಡಿದ್ದುಣ್ಣೋ ಮಾರಾಯ, ಉಳಿವಿಗೆ ಇದೆಯೇ ಉಪಾಯ?' (ಫೆ. 22, ಗುರುರಾಜ್ ಎಸ್. ದಾವಣಗೆರೆ) ಮುಖಪುಟ ಲೇಖನ ತುಂಬಾ ಅರ್ಥಪೂರ್ಣ ಎನಿಸಿತು. ಲೇಖನದ ಕೊನೆಯಲ್ಲಿರುವ 'ಸರಳ ಜೀವನವೇ ಮಾಲಿನ್ಯಕ್ಕೆ ಉತ್ತರ' ಎಂಬ ಮಾತು ತುಂಬಾ ನಿಜ. ಆದರೆ ಮಾಲಿನ್ಯ ನಿಯಂತ್ರಣಕ್ಕೆ ಒಂದು ಮಾದರಿ ರೂಪಿಸಬೇಕಾದ ಅಗತ್ಯ ತೀರಾ ಹೆಚ್ಚಿದೆ.

—ಜಿ.ಎಸ್. ಕುಮಾರಸ್ವಾಮಿ ದೊಗ್ಗನಾಳ್

## ಮಾಲಿನ್ಯದ ವಿಶ್ವರೂಪ ದರ್ಶನ

ಈ ಲೇಖನ, ಮಾಲಿನ್ಯದ ಕುರಿತು ವಿಶ್ವರೂಪ ದರ್ಶನ ಮಾಡಿಸಿತು. ಓದುತ್ತಾ ಹೋದಂತೆ ನಾವು ಎಂಥ ವಿಷಮ ಸ್ಥಿತಿಯಲ್ಲಿ ಬದುಕುತ್ತಿದ್ದೇವೆ ಎಂದೆನಿಸಿತು. ಅದಕ್ಕೆ ನಾವೇ ಕಾರಣ ಎಂಬುದು ತಿಳಿದು ಮನಸ್ಸಿಗೆ ಹಿಂಸೆಯಾಯಿತು. ಸರಳ ಜೀವನದ ಗಾಂಧಿ ಮಾರ್ಗವೇ ಮಾಲಿನ್ಯದ ಎಲ್ಲ ಸಮಸ್ಯೆಗಳಿಗೆ ಉತ್ತರ ಎಂಬ ಲೇಖಕರ ಮಾತು ಇಷ್ಟವಾಯಿತು. ಅನೇಕ ಸಾದೃಶ್ಯಗಳ ಇಡೀ ಲೇಖನ ವಿಶ್ವವಿದ್ಯಾಲಯದ ಪ್ರೌಢ ಪ್ರಬಂಧದಂತೆ ಇದೆ. ಇದು ಪಠ್ಯಕ್ಕೂ ಸೇರಬೇಕು.

—ಕರ್ಣಂ ಶ್ರೀರಾಮ ವಿ., ಹಲವಾಗಿಲು

## ಆತಂಕದ ದಿನಗಳು

ಭೂಮಿ ಮೇಲಿನ ಮಾಲಿನ್ಯದ ಚಿತ್ರಣ ಆತಂಕ ತಂದಿತು. ಪ್ಲಾಸ್ಟಿಕ್ ತ್ಯಾಜ್ಯ ಅಪಾಯಕಾರಿ ಮಟ್ಟದಲ್ಲಿ ಏರಿಕೆಯಾಗುತ್ತಿದೆ. ಇದರಿಂದ ಆಗಬಹುದಾದ ಅನಾಹುತಗಳ ಬಗ್ಗೆ ತಿಳಿದಿದ್ದರೂ ಮನುಷ್ಯ ಬುದ್ಧಿ ಕಲಿಯುತ್ತಿಲ್ಲ. ಗಾಳಿ, ಜಲ, ಸಕಲ ಪರಿಸರವನ್ನೂ ಹಾಳುಗೆಡವುವ ಚಾಳಿ ಬಿಡುತ್ತಿಲ್ಲ. ತಾನಲ್ಲದೇ ಇತರೆ ಜೀವಜಾಲಕ್ಕೂ ಕುತ್ತು ತರುತ್ತಿರುವ ಕುರಿತು ಸಣ್ಣ ಪಾಪಪ್ರಜ್ಞೆಯೂ ಇಲ್ಲ ಎಂಬುದೇ ಖೇದಕರ.

—ಜೀವಿತಾ ಎನ್.ಕೆ., ಮಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in